**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 241 ಜಿಪಸ 2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:04-09-2015

**ಅಧಿಕೃತ ಜ್ಞಾಪನ**

**ವಿಷಯ:** 2013-14 ಹಾಗೂ 2014-15ನೇ ಸಾಲಿನ ರಾಜೀವ್‌ಗಾಂಧಿ ಪಂಚಾಯತ್ ಸಶಕ್ತೀಕರಣ ಅಭಿಯಾನ ಯೋಜನೆಯಡಿ ಜಿಲ್ಲಾ ಪಂಚಾಯಿತಿ ಸಂಪನ್ಮೂಲ ಕಟ್ಟಡವನ್ನು ನಿರ್ಮಿಸುವ ಕಾಮಗಾರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಉಲ್ಲೇಖ**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 139 ಜಿಪಸ 2012, ದಿನಾಂಕ: 26.02.2014.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 182 ಜಿಪಸ 2014 (ಪಿ-2), ದಿನಾಂಕ: 18.07.2014.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 182 ಜಿಪಸ 2014 (ಪಿ-2), ದಿನಾಂಕ: 27.11.2014.
4. ಮುಖ್ಯ ಅಭಿಯಂತರರು (ಕೇಂದ್ರೀಯ) ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಕೆ.ಆರ್.ಐ.ಡಿ.ಎಲ್ ಬೆಂಗಳೂರು ಇವರ ಪತ್ರ ಸಂಖ್ಯೆ: ಕೆ.ಆರ್.ಐ.ಡಿ.ಎಲ್/ಕಾಮಗಾರಿ/ಜಿಪಸ/2015-16, ದಿನಾಂಕ: 11.08.2015

****

**ಪ್ರಸ್ತಾವನೆ:**

2013-14 ಹಾಗೂ 2014-15 ನೇ ಸಾಲಿನ ರಾಜೀವ್ ಗಾಂಧಿ ಪಂಚಾಯತ್ ಸಶಕ್ತೀಕರಣ ಯೋಜನೆಯಡಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸದೃಢ ಹಾಗೂ ಸಬಲೀಕರಣಕ್ಕಾಗಿ ಚುನಾಯಿತ ಪ್ರತಿನಿಧಿಗಳಿಗೆ ಸ್ಥಳೀಯ ಅವಶ್ಯಕತೆ, ಮೂಲಭೂತ ಸೌಲಭ್ಯ ಮತ್ತು ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ಧಾರೆಗಳನ್ನು ವೃದ್ಧಿಸುವುದು ಹಾಗೂ ಸಾಂಸ್ಥಿಕ ಆಡಳಿತದಲ್ಲಿ ಭಾಗವಹಿಸಲು ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ನೀಡುವುದು ಅತ್ಯವಶ್ಯಕವಾಗಿದೆ. ಸ್ಥಳೀಯವಾಗಿ ತರಬೇತಿ ನೀಡುವ ಹಾಗೂ ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿ ಸಂಶೋಧನೆಗಳನ್ನು ನಡೆಸುವ ಉದ್ದೇಶದಿಂದ ಪ್ರತಿ ಜಿಲ್ಲಾ ಪಂಚಾಯತಿ ಕೇಂದ್ರದಲ್ಲಿ ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಲು ಉಲ್ಲೇಖ (1) (2) ಮತ್ತು (3)ರ ಆದೇಶಗಳ ಮೂಲಕ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ ಹಾಗೂ ಸದರಿ ಯೋಜನೆಯಡಿ ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರ ಹೊಸ ಕಟ್ಟಡ ನಿರ್ಮಿಸಲು ಕಾಮಗಾರಿ ಅಂದಾಜು ಪಟ್ಟಿಯನ್ನು ರೂ. 150.00 ಲಕ್ಷಗಳಿಗೆ ತಯಾರಿಸಿ ಆಡಳಿತ್ಮಾಕ ಅನುಮೋದನೆ ನೀಡಲು ಕೋರಿ ಉಲ್ಲೇಖ (4) ರಲ್ಲಿ ಪ್ರಸ್ತಾವನೆ ಸಲ್ಲಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಬೇಕಾಗಿರುವುದರಿಂದ ಈ ಕೆಳಕಂಡ ಆದೇಶ.

| ಕ್ರಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | ಮಂಡ್ಯ ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರ ಕಟ್ಟಡದ ನಿರ್ಮಾಣ | 150.00 |

**ಆದೇಶ:**

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿ 2013-14 ಹಾಗೂ 2014-15 ನೇ ಸಾಲಿನ ರಾಜೀವ್ ಗಾಂಧಿ ಪಂಚಾಯತ್ ಸಶಕ್ತೀಕರಣ ಯೋಜನೆಯಡಿ ಮಂಡ್ಯ ಜಿಲ್ಲೆಯ ಜಿಲ್ಲಾ ಪಂಚಾಯತಿ ಸಂಪನ್ಮೂಲ ತರಬೇತಿ ಕೇಂದ್ರ ಕಟ್ಟಡವನ್ನು ನಿರ್ಮಿಸಲು ಅಂದಾಜು ಪಟ್ಟಿಗೆ 150.00 (ನೂರಾ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಲಕ್ಷಗಳಿಗೆ ಅನುದಾನದ ವಿನಿಯೋಗವು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ಪ್ರತ್ಯೇಕವಾಗಿ ನೀಡಿ ಆದೇಶಿಸಿದೆ.

**ನಿಬಂಧನೆಗಳು**

1. ಅನುದಾನವು ಯಾವ ಉದ್ದೇಶಗಳಿಗಾಗಿ ಬಿಡುಗಡೆಗೊಳಿಸಿದೆಯೋ ಅದೇ ಉದ್ದೇಶಗಳಿಗೆ ಮಾತ್ರ ವಿನಿಯೋಗಿಸುವುದು.
2. ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರ ಕಟ್ಟಡದ ವಾಸ್ತು ವಿನ್ಯಾಸವು ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು, ಇವರ ಸಲಹೆಯಂತೆ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ನಿಗಮವು ಸಿದ್ಧಪಡಿಸಿರುವ ಮಾದರಿಯಲ್ಲಿರಬೇಕು.
3. ಕಾಲಮಿತಿಯಲ್ಲಿ ಕಟ್ಟಡವನ್ನು ನಿರ್ಮಿಸಬೇಕು.
4. Non-Duplication, Non-Diversion ಮತ್ತು Non-Embezzlement ಪ್ರಮಾಣ ಪತ್ರಗಳನ್ನು ಸಲ್ಲಿಸುವುದು.
5. ಅನುದಾನದ ಬಳಕೆ ಪ್ರಮಾಣ ಪತ್ರವನ್ನು ಜಿ.ಎಫ್.ಆರ್.19-ಎ ನಮೂನೆಯಲ್ಲಿ ಕಡ್ಡಾಯವಾಗಿ ಸಲ್ಲಿಸುವುದು. ಈ ಕಾಮಗಾರಿಗಳ ಮಾಹಿತಿಯನ್ನು ಗಾಂಧಿ ಸಾಕ್ಷಿ ಕಾಯಕ (ವರ್ಕ್‌ಸಾಫ್ಟ್)ತಂತ್ರಾಂಶದಲ್ಲಿ ಅಳವಡಿಸುವುದು ಹಾಗೂ ಹಣ ಪಾವತಿಸುವಾಗ ವರ್ಕ್‌ಸಾಫ್ಟ್ ಮೂಲಕವೇ ಪಾವತಿಸುವುದು.
6. ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರ ಕಟ್ಟಡದ ಕಾಮಗಾರಿಯನ್ನು ಎಮ್.ಜಿ.ಎನ್.ಆರ್.ಇ.ಜಿ.ಎಸ್ ಯೋಜನೆಯಡಿಯ ಗುಣಮಟ್ಟ ನಿಯಂತ್ರಣ ವಿಭಾಗದಿಂದ ಗುಣಮಟ್ಟ ಪರಿಶೀಲನೆ ಮಾಡಿಸುವುದು.

(ಕೆ. ರಮೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ದಿನಾಂಕ ...... 4/9
ಗ್ರಾ.ಅ.ಪಂ.ರಾ ಇಲಾಖೆ

**ಪ್ರತಿಯನ್ನು:**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ನಿಗಮ, ಗ್ರಾಮೀಣಾಭಿವೃದ್ಧಿ ಭವನ, ಆನಂದ ರಾವ್ ಸರ್ಕಲ್, ಬೆಂಗಳೂರು.
2. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
3. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತಿ, ಮಂಡ್ಯ
4. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತಿ, ಜಿಲ್ಲಾ ಪಂಚಾಯತಿ, ಮಂಡ್ಯ
5. ಕಾರ್ಯಪಾಲಕ ಇಂಜಿನೀಯರ್, ಕೆ.ಆರ್.ಐ.ಡಿ.ಎಲ್, ಮಂಡ್ಯ

5/9/15

**ಪ್ರತಿಯನ್ನು ಮಾಹಿತಿಗಾಗಿ:**

1. ಪ್ರಧಾನ ಕಾರ್ಯದರ್ಶಿಗಳು(ಗ್ರಾಅಪ)/ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ನಿರ್ದೇಶಕರು (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

05/9/15

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2015-16ನೇ ಸಾಲಿನ ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್ (ಆರ್.ಜಿ.ಪಿ.ಎಸ್.ಎ) ಯೋಜನೆಯಡಿ ರಾಜ್ಯ ಸರ್ಕಾರದಿಂದ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆಗೆ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 139 ಜಿಪಸ 2012(ಪಿ-3) ದಿನಾಂಕ:25.07.2013
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 139 ಜಿಪಸ 2012 ದಿನಾಂಕ:26.02.2014
3. ಸರ್ಕಾದ ಆದೇಶ ಸಂಖ್ಯೆ: ಗ್ರಾಅಪ 139 ಜಿಪಸ 2012(ಪಿ-3) ದಿನಾಂಕ:18.07.2014
4. ಸರ್ಕಾದ ಆದೇಶ ಸಂಖ್ಯೆ: ಗ್ರಾಅಪ 182 ಜಿಪಸ 2014(ಪಿ-2) ದಿನಾಂಕ:27.11.2014

**ಪ್ರಸ್ತಾವನೆ:**

ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ರಾಷ್ಟ್ರದಾದ್ಯಂತ ಅನುಷ್ಠಾನಗೊಳಿಸುತ್ತಿರುವ e-PANCHAYAT, ಪಂಚಾಯತ್ ಎಂಪವರ್‌ಮೆಂಟ್ ಅಂಡ್ ಅಕೌಂಟಬಿಲಿಟಿ ಇನ್ಸೆಂಟೀವ್ ಸ್ಕೀಮ್ (PEAIS) ಹಾಗೂ ಪಂಚಾಯತ್ ಮಹಿಳಾ ಏವಂ ಯುವಶಕ್ತಿ ಅಭಿಯಾನ (PMEYSA) ಯೋಜನೆಗಳಲ್ಲಿ ಅಳವಡಿಸಿಕೊಳ್ಳಲಾಗಿದ್ದ ಸಾಮರ್ಥ್ಯಾಭಿವೃದ್ಧಿ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಸಮ್ಮಿಳನಗೊಳಿಸಿ, ಪಂಚಾಯತ್ ರಾಜ್ ಸಂಸ್ಥೆಗಳನ್ನು ಹಾಗೂ ಅದರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಂಚಾಯತ್ ರಾಜ್ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಸಾಮರ್ಥ್ಯಾಭಿವೃದ್ಧಿಯನ್ನು ಬಲಪಡಿಸುವ ಉದ್ದೇಶದಿಂದ 2012-13ನೇ ಸಾಲಿನಿಂದ ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್(ಆರ್.ಜಿ.ಪಿ.ಎಸ್.ಎ) ಎಂಬ ನೂತನ ಯೋಜನೆಯನ್ನು ಕೇಂದ್ರ ಸರ್ಕಾರವು ಜಾರಿಗೊಳಿಸಿದೆ.

ಮೇಲೆ ಓದಲಾದ ಉಲ್ಲೇಖ(1)ರಲ್ಲಿನ ಸರ್ಕಾರದ ಆದೇಶದಲ್ಲಿ ಈ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

2015-16ನೇ ಸಾಲಿಗೆ ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್(ಆರ್.ಜಿ.ಪಿ.ಎಸ್.ಎ) ಯೋಜನೆಯಡಿ ರೂ.3000.00 ಲಕ್ಷಗಳಲ್ಲಿ ಒದಗಿಸಿರುತ್ತಾರೆ. ಇದರಲ್ಲಿ ಎರಡನೇಯ ಕಂತಿನ ಅನುದಾನವಾಗಿ ರೂ.750.00ಲಕ್ಷಗಳನ್ನು ಬಿಡುಗಡೆಗೊಳಿಸಲು ಸರ್ಕಾರ ಉದ್ದೇಶಿಸಿದೆ. ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್(ಆರ್.ಜಿ.ಪಿ.ಎಸ್.ಎ) ಯೋಜನೆ ಅನುದಾನದ ಲೆಕ್ಕಶೀರ್ಷಿಕೆ 2515-00-101-0-31 (ಯೋಜನೆ)ರಡಿ ಸ್ವೀಕೃತಗೊಂಡಿರುತ್ತದೆ.

ಪಂಚಾಯತಿ ರಾಜ್ ವ್ಯವಸ್ಥೆಯು ಸದೃಢ ಹಾಗೂ ಸಬಲೀಕರಣಕ್ಕಾಗಿ ಚುನಾಯಿತ ಪ್ರತಿನಿಧಿಗಳಿಗೆ ಸ್ಥಳೀಯ ಅವಶ್ಯಕತೆ, ಮೂಲಭೂತ ಸೌಲಭ್ಯ ಮತ್ತು ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಧಾರೆಗಳನ್ನು ವೃದ್ಧಿಸುವುದು ಹಾಗೂ ಸಾಂಸ್ಥಿಕವಾಗಿ ಆಡಳಿತದಲ್ಲಿ ಭಾಗವಹಿಸಲು ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ನೀಡುವುದು ಅತ್ಯವಶ್ಯಕವಾಗಿದೆ. ಸ್ಥಳೀಯವಾಗಿ ತರಬೇತಿ ನೀಡುವ ಹಾಗೂ ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿರುವ ಸಂಶೋಧನೆಗಳನ್ನು ನಡೆಸುವ ಉದ್ದೇಶದಿಂದ ಪ್ರತಿ ಜಿಲ್ಲಾ ಪಂಚಾಯತಿ ಕೇಂದ್ರದಲ್ಲಿ ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರವನ್ನು "ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್ (ಆರ್.ಜಿ.ಪಿ.ಎಸ್.ಎ) ಯೋಜನೆ"ಯಡಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಮೇಲೆ ಓದಲಾದ ಉಲ್ಲೇಖ(2) (3) &(4) ರ ಆದೇಶಗಳ ಪ್ರಕಾರ ಈಗಾಗಲೇ ರಾಜ್ಯದ 23 ಜಿಲ್ಲಾ ಪಂಚಾಯತಿಗಳಲ್ಲಿ ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರಗಳ ಸ್ಥಾಪನೆ ಉದ್ದೇಶಕ್ಕಾಗಿ ಕಳೆದ ಸಾಲಿನಲ್ಲಿ ಪ್ರತಿ ಜಿಲ್ಲಾ ಪಂಚಾಯತಿಗೆ ರೂ.100.00ಲಕ್ಷಗಳಂತೆ 23 ಜಿಲ್ಲಾ ಪಂಚಾಯತಿಗಳಿಗೆ ಒಟ್ಟಾರೆ ರೂ.23.00ಕೋಟಿಗಳನ್ನು ಕರ್ನಾಟಕ ಸರ್ಕಾರ ಸ್ವಾಮ್ಯದ "ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ನಿಗಮ"ಕ್ಕೆ ಬಿಡುಗಡೆ ಮಾಡಲಾಗಿದೆ.

ಅನುಬಂಧದಲ್ಲಿ ಲಗತ್ತಿಸಿರುವ ಜಿಲ್ಲಾ ಸಂಪನ್ಮೂಲ ಕೇಂದ್ರದ ಕಟ್ಟಡಗಳ ಮುಂದುವರಿದ ಕಾಮಗಾರಿಗಳಿಗಾಗಿ 2015-16ನೇ ಸಾಲಿನಲ್ಲಿ ಒಟ್ಟಾರೆ ರೂ.7.50ಕೋಟಿಗಳನ್ನು ಬಿಡುಗಡೆ ಮಾಡಲು ನಿರ್ಧರಿಸಿದೆ. ಅದಕ್ಕಾಗಿ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 73 ಜಿಪಸ 2015, ಬೆಂಗಳೂರು, ದಿನಾಂಕ:04-09-2015.**

ಮೇಲಿನ ಎಲ್ಲಾ ಪ್ರಸ್ತಾವನೆಗಳನ್ನು ಗಣನೆಗೆ ತೆಗೆದುಕೊಂಡು, "ರಾಜೀವ್‌ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್(ಆರ್.ಜಿ.ಪಿ.ಎಸ್.ಎ)ಯೋಜನೆಯಡಿ "ಪಂಚಾಯತ್ ರಾಜ್ ಚುನಾಯಿತ ಪ್ರತಿನಿಧಿಗಳ ಸಾಮರ್ಥ್ಯಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯ ಅನುಷ್ಠಾನಾಧಿಕಾರಿಗಳಿಗೆ ಪುನಶ್ಚೇತನ ತರಬೇತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ವ್ಯವಸ್ಥೆಯ ಸದೃಢೀಕರಣ ಸಂಬಂಧದ ಕಾರ್ಯಾಗಾರ ಮತ್ತು ಸಂಪರ್ಕ ಸಭೆಗಳನ್ನು ನಡೆಸಲು ಜಿಲ್ಲಾ ಪಂಚಾಯತಿ ಕೇಂದ್ರಗಳ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರಗಳನ್ನು ನಿರ್ಮಿಸಲು 2015-16ನೇ ಸಾಲಿನ ಲೆಕ್ಕ ಶೀರ್ಷಿಕೆ: 2515-00-101-0-31(ಯೋಜನೆ)ರಡಿ ಒದಗಿಸಿರುವ ಅನುದಾನದಿಂದ ರೂ. 7.50 ಕೋಟಿಗಳನ್ನು (ಏಳು ಕೋಟಿ ಐವತ್ತು ಲಕ್ಷ ರೂಪಾಯಿಗಳನ್ನು ಮಾತ್ರ)ಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ(ಜಿಲ್ಲಾ ಪಂಚಾಯತ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರು ರಾಜ್ಯ ಹುಜೂರ್ ಖಜಾನೆಯಿಂದ ಪೇಯಿಸ್ ರಸೀತಿಯ ಮೇಲೆ ಡ್ರಾ ಮಾಡಲು ಹಾಗೂ ಈ ಅನುದಾವನ್ನು ಕರ್ನಾಟಕ ಸರ್ಕಾರ ಸ್ವಾಮ್ಯದ "ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ನಿಗಮ"ದ ಕಾರ್ಪೋರೇಶನ್ ಬ್ಯಾಂಕ್, ಎಸ್.ಸಿ. ರಸ್ತೆ ಶಾಖೆಯಲ್ಲಿನ ಉಳಿತಾಯ ಖಾತೆ ಸಂಖ್ಯೆ 014401601000499(IFSC Code CORP0000144)ಗೆ ಬೆಂಗಳೂರಿನ ದೇನಾ ಬ್ಯಾಂಕ್, ಇಂದಿರಾನಗರದ ಶಾಖೆಯಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ "ರಾಜೀವ್‌ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್(ಆರ್.ಜಿ.ಪಿ.ಎಸ್.ಎ)ಯೋಜನೆಯ ಹೆಸರಿನಲ್ಲಿರುವ ಉಳಿತಾಯ ಖಾತೆ ಸಂಖ್ಯೆ 052110026480 ಯಿಂದ ಅನುದಾನವನ್ನು ಆರ್.ಟಿ.ಜಿ.ಎಸ್ ಮೂಲಕ ಬಿಡುಗಡೆಗೊಳಿಸಲು ವರ್ಗಾಯಿಸಲು ಆದೇಶಿಸಿದೆ. ಬಿಡುಗಡೆ ಮಾಡಿರುವ ಏಳು ಕೋಟಿ ಐವತ್ತು ಲಕ್ಷಗಳನ್ನು ಅನುಬಂಧದಲ್ಲಿ ನಮೂದಿಸಿರುವ ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರದ ಕಟ್ಟಡದ ಕಾಮಗಾರಿಗಳಿಗೆ ನಿಗಧಿಗೊಳಿಸಿರುವ ಮೊತ್ತವನ್ನು ವಿನಿಯೋಗಿಸುವಂತೆ ಆದೇಶಿಸಿದೆ.

**ಅನುದಾನದ ವಿನಿಯೋಗವು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

1. ಅನುದಾನವನ್ನು ಯಾವ ಉದ್ದೇಶಗಳಿಗಾಗಿ ಬಿಡುಗಡೆಗೊಳಿಸಲಾಗಿದೆಯೋ, ಅದೇ ಉದ್ದೇಶಗಳಿಗೆ ಮಾತ್ರ ವಿನಿಯೋಗಿಸುವುದು.
2. ಕಟ್ಟಡದ ವಾಸ್ತು ವಿನ್ಯಾಸವು ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರ ಸಲಹೆಯಂತೆ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ನಿಗಮವು ಸಿದ್ಧಪಡಿಸಿರುವ ಮಾದರಿಯಲ್ಲಿರಬೇಕು.
3. ಕಾಲಮಿತಿಯಲ್ಲಿ ಕಟ್ಟಡವನ್ನು ನಿರ್ಮಿಸಬೇಕು.

4. ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಅನುದಾನಕ್ಕೆ ಜಿ.ಎಫ್.ಆರ್ 19–ಎ ನಿಗಧಿತ ನಮೂನೆ (ಲಗತ್ತಿಸಿದೆ) ಯಲ್ಲಿ ಹಣ ಬಳಕೆ ಪ್ರಮಾಣ ಪತ್ರವನ್ನು ನಿರ್ದೇಶಕರು (ಪಂ.ರಾಜ್–2) ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ಸಲ್ಲಿಸುವುದು. Non-Duplication, Non-Diversion ಮತ್ತು Non-Embezzlement ಪ್ರಮಾಣ ಪತ್ರಗಳನ್ನು ಸಲ್ಲಿಸುವುದು.
5. ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರ ಕಟ್ಟಡಗಳ ಕಾಮಗಾರಿಗಳನ್ನು ಎಂ.ಜಿ.ಎನ್.ಆರ್.ಇ.ಜಿ.ಎಸ್ ಯೋಜನೆಯಡಿಯ ಗುಣಮಟ್ಟ ನಿಯಂತ್ರಣ ವಿಭಾಗದಿಂದ ಗುಣಮಟ್ಟ ಪರಿಶೀಲನೆಯನ್ನು ಮಾಡಿಸುವುದು.
6. ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರ ಕಟ್ಟಡಗಳ ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸುವುದು.
7. ರಾಜೀವ್ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ್ (ಆರ್.ಜಿ.ಪಿ.ಎಸ್.ಎ) ಯೋಜನೆಯ ಕೇಂದ್ರ ಸರ್ಕಾರ ಪ್ರಾಯೋಜಿತ ತೃತೀಯ ಮಧ್ಯವರ್ತಿ(Third Party Evaluation)ಗಳಿಂದ ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು ಪರಿವೀಕ್ಷಿಸಲು ಹಾಗೂ ಮೌಲ್ಯಮಾಪನ ಮಾಡಲು ಆಗಮಿಸುವರು.

ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್.ಡಿ 230 ವೆಚ್ಚ–6/2015 ದಿನಾಂಕ:20.08.2015ರ ಸಹಮತಿಯ ಮೇರೆಗೆ ಮತ್ತು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ/02/ಟಿಎಫ್‌ಪಿ/2015, ದಿನಾಂಕ:09–04–2015ರಲ್ಲಿ ರಲ್ಲಿ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಎಂ.ಜುಲ್ಫಿಕಾರ್ ಉಲ್ಲಾ)
ನಿರ್ದೇಶಕರು (ಪಂ.ರಾಜ್–2)
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತುಮಕೂರು, ಹಾಸನ, ರಾಯಚೂರು, ಮೈಸೂರು, ಚಾಮರಾಜನಗರ, ಶಿವಮೊಗ್ಗ, ಬಾಗಲಕೋಟೆ, ದಾವಣಗೆರೆ, ವಿಜಯಪುರ, ಕಲಬುರಗಿ, ದಕ್ಷಿಣ ಕನ್ನಡ ಮತ್ತು ಬಳ್ಳಾರಿ
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ನಿಗಮ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
6. ಇಲಾಖಾ ವೆಬ್‌ಸೈಟ್ / ಕರ್ನಾಟಕ ವಿಕಾಸ ಮಾಸ ಪತ್ರಿಕೆ.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ನಿರ್ದೇಶಕರು (ಪಂ.ರಾಜ್–2), ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಅನುಬಂಧ-1

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 62 ಜಿಪಸ 2015, ಬೆಂಗಳೂರು, ದಿನಾಂಕ: 04-09-2015.**

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲೆಗಳ ಹೆಸರು | ಅನುದಾನದ ಮೊತ್ತ |
|---|---|---|
| 1 | ತುಮಕೂರು | 100.00 ಲಕ್ಷ |
| 2 | ಹಾಸನ | 100.00 ಲಕ್ಷ |
| 3 | ರಾಯಚೂರು | 100.00 ಲಕ್ಷ |
| 4 | ದಾವಣಗೆರೆ | 50.00 ಲಕ್ಷ |
| 5 | ಬಳ್ಳಾರಿ | 50.00 ಲಕ್ಷ |
| 6 | ಚಾಮರಾಜನಗರ | 50.00 ಲಕ್ಷ |
| 7 | ಕಲಬುರಗಿ | 50.00 ಲಕ್ಷ |
| 8 | ವಿಜಯಪುರ | 50.00 ಲಕ್ಷ |
| 9 | ಬಾಗಲಕೋಟೆ | 50.00 ಲಕ್ಷ |
| 10 | ಶಿವಮೊಗ್ಗ | 50.00 ಲಕ್ಷ |
| 11 | ಮೈಸೂರು | 50.00 ಲಕ್ಷ |
| 12 | ದಕ್ಷಿಣ ಕನ್ನಡ | 50.00 ಲಕ್ಷ |
| | ಒಟ್ಟು | **750.00 ಲಕ್ಷ** |

ಎಸ್ ಜಿ. ಜುಲ್ಫಿಕಾರ್ ಉಲ್ಲಾ
ನಿರ್ದೇಶಕರು (ಪಂ.ರಾಜ್-2) ಮತ್ತು ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

04.09.15